**2009ರಲ್ಲಿ ಚರ್ಚ್‌ಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಬಂಧಿಸಲಾದ ಆರೋಪಿತರ ವಿವರ**

| ಕ್ರ.ಸಂ. | ನಗರ/ಜಿಲ್ಲೆ | ಬಂಧಿಸಲಾದ ಆರೋಪಿತರ ಸಂಖ್ಯೆ |
|---|---|---|
| 1 | ಬೀದರ್ | ತನಿಖೆ ನಡೆದಿದ್ದು ಯಾರನ್ನು ಬಂಧಿಸಿರುವುದಿಲ್ಲ. |
| 2 | ಉಡುಪಿ | ತನಿಖೆ ನಡೆದಿದ್ದು ಯಾರನ್ನು ಬಂಧಿಸಿರುವುದಿಲ್ಲ. |

**2010ರಲ್ಲಿ ಚರ್ಚ್‌ಗಳ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ಬಂಧಿಸಲಾದ ಆರೋಪಿತರ ವಿವರ**

| ಕ್ರ.ಸಂ. | ನಗರ/ಜಿಲ್ಲೆ | ಬಂಧಿಸಲಾದ ಆರೋಪಿತರ ಸಂಖ್ಯೆ |
|---|---|---|
| 1 | ಮೈಸೂರು ನಗರ | ತನಿಖೆ ನಡೆದಿದ್ದು ಯಾರನ್ನು ದಸ್ತಗಿರಿ ಮಾಡಿರುವುದಿಲ್ಲ. |
| 2 | ಮಂಡ್ಯ | 02 |
| 3 | ಉಡುಪಿ | ತನಿಖೆ ನಡೆದಿದ್ದು ಯಾರನ್ನು ದಸ್ತಗಿರಿ ಮಾಡಿರುವುದಿಲ್ಲ. |
| | **ಒಟ್ಟು** | **02** |

**ಅಂಗನವಾಡಿ ಕಾರ್ಯಕರ್ತರ ಗೌರವ ಧನ**

**399 (965) ಶ್ರೀ ಗೋಪಾಲಭಂಡಾರಿ ಹೆಚ್ (ಕಾರ್ಕಳ) :** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ನೀಡಲಾಗುತ್ತಿರುವ ಗೌರವಧನ ಎಷ್ಟು; ಗೌರವಧನ ನೀಡುವಲ್ಲಿ ಆಗುತ್ತಿರುವ ತಾರತಮ್ಯ ಹಾಗೂ ವ್ಯತ್ಯಾಸಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ ಕೂಡಲೆ ಸರಿಪಡಿಸಲಾಗುವುದೇ;

**ಶ್ರೀ ಪಿ.ಎಂ. ನರೇಂದ್ರ ಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :**

ಅ) ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಚಿಕ್ಕಬಳ್ಳಾಪುರ, ಉಡುಪಿ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಈ ಹಿಂದಿನ ಸಾಲುಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ನಿಗದಿತ ಸಮಯದಲ್ಲಿ ಖಜಾನೆಯಿಂದ ಸೆಳೆಯದೆ ಅಂಗನವಾಡಿ ಕಾರ್ಯಕರ್ತೆಯರ ಗೌರವಧನ ನೀಡುವಲ್ಲಿ ವಿಳಂಬವಾಗಿರುತ್ತದೆ. ಈ ರೀತಿಯ ಪ್ರಕರಣಗಳು ಉದ್ಭವಿಸಿದಾಗ ಕೂಡಲೆ ಸರ್ಕಾರದಿಂದ ಹೆಚ್ಚುವರಿ ಹಣ ಪಡೆದು ಸರಿಪಡಿಸಲಾಗುವುದು.

**ಅನುಬಂಧ**

**ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನದ ವಿವರ:**

| ಕ್ರ ಸಂ. | ವಿದ್ಯಾರ್ಹತೆಯ ವಿವರ | ಭಾರತ ಸರ್ಕಾರದಿಂದ ನೀಡುತ್ತಿರುವ ಗೌರವಧನ | ರಾಜ್ಯ ಸರ್ಕಾರ ದಿಂದ ನೀಡುತ್ತಿರುವ ಹೆಚ್ಚುವರಿ ಗೌರವಧನ | ಒಟ್ಟು |
|---|---|---|---|---|
| 1 | ಕಾರ್ಯಕರ್ತೆಯರಿಗೆ ಎಸ್.ಎಸ್.ಎಲ್.ಸಿ. ಫೇಲ್ | ರೂ.1438 | ರೂ.1000 | ರೂ.2438 |
| 2 | ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 5 ವರ್ಷದ ಅನುಭವ | ರೂ.1469 | ರೂ.1000 | ರೂ.2469 |
| 3 | ಎಸ್.ಎಸ್.ಎಲ್.ಸಿ. ಫೇಲ್ ಜೊತೆಗೆ 10 ವರ್ಷದ ಅನುಭವ | ರೂ.1500 | ರೂ.1000 | ರೂ.2500 |

| | | | | |
|---|---|---|---|---|
| 4 | ಎಸ್.ಎಸ್.ಎಲ್.ಸಿ. ಉತ್ತೀರ್ಣ | ರೂ.1500 | ರೂ.1000 | ರೂ.2500 |
| 5 | ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 5 ವರ್ಷದ ಅನುಭವ | ರೂ.1531 | ರೂ.1000 | ರೂ.2531 |
| 6 | ಎಸ್.ಎಸ್.ಎಲ್.ಸಿ. ಉತ್ತೀರ್ಣ ಜೊತೆಗೆ 10 ವರ್ಷದ ಅನುಭವ | ರೂ.1563 | ರೂ.1000 | ರೂ.2563 |
| 7 | ಅಂಗನವಾಡಿ ಸಹಾಯಕಿಯರು | ರೂ.750 | ರೂ.500 | ರೂ.1250 |
| 8 | ಮಿನಿ ಅಂಗನವಾಡಿ ಕಾರ್ಯಕರ್ತೆಯರು | ರೂ.750 | ರೂ.500 | ರೂ.1250 |

**ಬಿ.ಎಂ.ಟಿ.ಸಿ. ಹವಾನಿಯಂತ್ರಿತ ಬಸ್ ಸೇವೆ**

**400 (941) ಶ್ರೀ ಹ್ಯಾರೀಸ್. ಎನ್.ಎ (ಶಾಂತಿನಗರ) :** ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಎಂ.ಟಿ.ಸಿ. ಹವಾನಿಯಂತ್ರಿತ ಬಸ್ ಸೇವೆಗಾಗಿ ಒಟ್ಟು ಎಷ್ಟು ಬಸ್‌ಗಳನ್ನು ಬಳಸಿಕೊಳ್ಳಲಾಗಿದೆ;

ಆ) ಹವಾ ನಿಯಂತ್ರಿತ ಬಸ್ ಸೇವೆಯನ್ನು ಲಾಭದಾಯಕ ಹಾಗೂ ಜಯಪ್ರಿಯಗೊಳಿಸಲು ಸರ್ಕಾರದ ಕಾರ್ಯಕ್ರಮಗಳೇನು;

ಇ) ಕಳೆದ ಎರಡು ವರ್ಷಗಳಲ್ಲಿನ ಲಾಭ–ನಷ್ಟದ ವಿವರಗಳೇನು; ಈ ಅವಧಿಯಲ್ಲಿನ ಬಸ್ ಖರೀದಿ ಕುರಿತು ವಿವರಗಳೇನು?

**ಶ್ರೀ ಆರ್.ಅಶೋಕ (ಸಾರಿಗೆ ಸಚಿವರು) :**

ಅ) ಬೆಂ.ಮ.ಸಾ.ಸಂಸ್ಥೆಯು ಹವಾನಿಯಂತ್ರಿತ ಬಸ್ಸು ಸೇವೆಗಾಗಿ ಒಟ್ಟು 530 ಬಸ್ಸುಗಳನ್ನು ಬಳಸಿಕೊಳ್ಳುತ್ತಿದೆ.